<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 176/2015 ಸಿಡಬ್ಲೂ : 17 ಪಿಡಬ್ಲೂಃ 14

ಪ್ರಮಾಣವಚನ ಬೋಧಿಸಲಾಯಿತು ದಿಃ 12-03-2026

ಹೆಸರು : ಬಸಪ್ಪ

ತಂದೆ ಹೆಸರು : ಶಿವಪ್ಪ ವನಂಜಕರ್

ವಯಸ್ಸು : 43 ವರ್ಷ

ಉದ್ಯೋಗ : ಪಿ ಐ ಶಹಬಾದ್ ವೃತ್ತ

ವಾಸಸ್ಥಳ : ಶಹಬಾದ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 10-12-2012 ರಿಂದ 25-08-2014 ವರೆಗೂ ಸೇಡಂ ಪಿ ಎಸ್ ನಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಅವಧಿಯಲ್ಲಿ ದಿಃ26-07-2014 ರಂದು ಸದರಿ ಪ್ರಕರಣದ ಕಡತವನ್ನು ಚಾ ಸಾ 16 ರವರಿಂದ ಪಡೆದುಕೊಂಡು ಅದೇ ದಿನ 1 ನೇ ಆರೋಪಿತನು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣ ಜಾಮೀನು ಪಡೆದುಕೊಂಡು ಬಂದಿರುವುದರಿಂದ ಆತನಿಗೆ ವಿಚಾರಣೆಗೆ ಒಳಪಡಿಸಿ. ನಂತರ ಚಾ ಸಾ 14 ಮತ್ತು 15 ರವರಿಗೆ ಠಾಣೆಗೆ ಬರಮಾಡಿಕೊಂಡು ಆರೋಪಿತನು ಹಾಜರು ಪಡಿಸಿದ 3 ರಿಜಿಸ್ಟಾರ್ ವಹಿಗಳನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ.

ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿ ಪಿ 7 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 7(ಬಿ) ಎಂದು ಗುರುತಿಸಲಾಯಿತು. ನಂತರ ಸದರಿ ಆರೋಪಿತನಿಗೆ ತನಿಖೆಗೊಳಪಡಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾ ಸಾ 18 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಬಿ ಎಸ್ ಎಸ್   ವಕೀಲರಿಂದ ಃ

ದಿ.26-07-2014 ರಂದು ಚಾ ಸಾ 14 ಮತ್ತು 15 ರವರು ಸಮಕ್ಷಮ ಮೂರು ರಿಜಿಸ್ಟಾರ್ ವಹಿಗಳನ್ನು ಜಪ್ತಿ ಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ.

**ಪ್ರ. ದ. ನ್ಯಾ ದಂ. ಸೇಡಂ.**